



ಒಬ್ಬ ಅಧಿಕಾರಿಯ ಬಳಿ ಒಬ್ಬ ಸೇವಕನಿದ್ದ. ಅವನು ತೋಟದಲ್ಲಿ ಬಹಳ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದ. ಆದರೆ, ಸಿಗುತ್ತಿದ್ದ ಸಂಬಳವು ಸಾಲುತ್ತಿರಲಿಲ್ಲ. ಅವನು ನಿತ್ಯ ತೊಡುತ್ತಿದ್ದ ಬಟ್ಟೆಬರೆಗಳೆಲ್ಲವೂ ಹರಿದು ಚಿಂದಿಯಾಗಿದ್ದವು. ಒಡೆಯನಲ್ಲಿ ಸ್ವಲ್ಪ ಹಣವನ್ನು ಸಾಲವಾಗಿ ಕೇಳೋಣ ಅಂದು ಕೊಂಡ. ಆದರೆ, ಯಾವಾಗಲೂ ಒಡೆಯನ ಮುಖಭಾವವು ಕಲ್ಲುಬಂಡೆಯಂತೆ ತೋರುತ್ತಿತ್ತು. ನೋಡಲು ದಿಗಿಲಾಗುತ್ತಿತ್ತು. ಒಂದು ದಿನವಾದರೂ ಧೈರ್ಯ ಮಾಡಿ ಸಾಲ ಕೇಳಲಾಗಲಿಲ್ಲ. ಅವನಿಗೆ ಯಾವ ಸಹಾಯವೂ ದೊರೆಯಲಿಲ್ಲ.

ಒಂದು ದಿನ ಒಡೆಯನ ಜನ್ಮದಿನ ಬಂತು. ವೈಭವದಿಂದ ಆಚರಿಸಲಾಯಿತು. ಈಗಲಾದರೂ ಉಡುಗೊರೆಯಾಗಿ ಏನಾದರೂ ಸಿಕ್ಕೀತೆಂದು ಆ ಸೇವಕ ಆಶಿಸಿದ. ಆದರೆ ಒಡೆಯ ನೀಡಿದ ಇನಾಮು ಒಂದು 'ಬೈಬಲ್'. ಸೇವಕನಿಗೆ ನಿರಾಶೆಯಾಯಿತು. ಅಲ್ಲದೆ ಒಡೆಯ ನುಡಿದ: "ಇದನ್ನು ದಿನವೂ ಸ್ವಲ್ಪ ಸ್ವಲ್ಪವೇ ಓದಿಕೊ. ದೇವರು ಒಳ್ಳೆಯದು ಮಾಡುತ್ತಾನೆ". ಮನೆಗೆ ಹೋದ ಸೇವಕ ಆ ಪುಸ್ತಕವನ್ನು ಒಂದೆಡೆ ಇರಿಸಿಬಿಟ್ಟ.



ಐದಾರು ದಿನಗಳು ಕಳೆದ ಬಳಿಕ ಒಡೆಯ ಕೇಳಿದ. 'ನಾನು ಕೊಟ್ಟ ಪುಸ್ತಕವನ್ನು ಒಂದಷ್ಟು ಓದಿದೆಯಾ?" ಸೇವಕನು "ಹ್ಞೂ" ಎಂದು ಸುಳ್ಳು ಹೇಳಿದ. "ಸುಳ್ಳು ಹೇಳಬೇಡ, ನೀನು ಅದನ್ನು ಒಮ್ಮೆ ತಿರುಗಿಹಾಕಿದ್ದರೂ ಸಾಕಾಗಿತ್ತು. ಕಡೆಯ ಪಕ್ಷ ಒಳ್ಳೆಯ ಬಟ್ಟೆಗಳನ್ನಾದರೂ ತೊಟ್ಟಿರುತ್ತಿದ್ದಿ." ಸೇವಕನು ಏನೂ ಹೇಳಲಿಲ್ಲ. ಒಡೆಯನು ಮತ್ತೆ ನುಡಿದ "ಸರಿ, ನಾಳೆ ಅದನ್ನು ತೆಗೆದುಕೊಂಡು ಬಾ, ನನ್ನ ಮುಂದೆಯೇ ಓದುವಿಯಂತೆ."

ಮಾರನೆ ದಿವಸ ಸೇವಕನು ಮನೆಯಿಂದ ಬೈಬಲ್ ತಂದ. ಒಡೆಯನ ಮುಂದೆ ಅದನ್ನು ಮೊದಲ ಬಾರಿಗೆ ತೆರೆದ. ಮೊದಲ ಪುಟದಲ್ಲಿ ಹತ್ತು ರೂಪಾಯಿಯ ನೋಟಿತ್ತು. ಮುಂದಿನ ಪುಟಗಳಲ್ಲಿ ಐದ್ಯೆದರ ನೋಟುಗಳಿದ್ದುವು! ಅವನಿಗೆ ಖುಷಿಯಾಯಿತು. ತನ್ನ ತಪ್ಪಿನ ಅರಿವಾಗಿ ಒಡೆಯನ ಎದುರು ಅವಮಾನದಿಂದ ತಲೆ ತಗ್ಗಿಸಿದ. ಒಡೆಯ ಅವನ ಭುಜ ತಟ್ಟಿ ಕಳಿಸಿಕೊಟ್ಟ.

ಸೇವಕನು ಅಂದುಕೊಂಡ: 'ನನಗೆ ಎಂತಹ ಒಳ್ಳೆಯ ಧಣಿ ಸಿಕ್ಕಿದ್ದಾನೆ! ತನ್ನ ಬೇಕು-ಬೇಡಗಳು ಅವನಿಗೆ ತಿಳಿದಿದೆ. ಅಷ್ಟೇ ಸಾಕು."

**ಸಂಗ್ರಹ:** ಡಿ. ವಿ. ಮೋಹನ ಪ್ರಕಾಶ್
**ಚಿತ್ರ:** ಪಿ. ಪುರುಷೋತ್ತಮ ಕಾರಂತ